5ನೇ ಹೆಚ್ಚುವರಿ ಜಿಲ್ಲಾ ಮತ್ತು ಸತ್ರ ನ್ಯಾಯಾಲಯ, ದ.ಕ., ಮಂಗಳೂರು,
ಕಾರ್ಯನಿರ್ವಹಣೆಃ ಪುತ್ತೂರು, ದ.ಕ.

## ಸೆಷನ್ಸ್ ಕೇಸ್ ನಂಬ್ರ **5006/2019**

| | | | |
|---|---|---|---|
| ಸಾಕ್ಷಿದಾರರ ಹೆಸರು | : | ವಿಕ್ರಮ್ ಜೈನ್ | ಪ್ರಾಸಾಃ6 |
| ತಂದೆಯ ಹೆಸರು | : | ಬಿ. ಮಂಜಪ್ಪ ರೈ | ಚಾಸಾಃ 9 |
| ಪ್ರಾಯ | : | 39 ವರ್ಷ | ದಿನಾಂಕಃ **22.08.2025** ರಂದು ಸಾಕ್ಷಿದಾರರಿಗೆ ಪ್ರಮಾಣವಚನ ಬೋಧಿಸಲಾಯಿತು. |
| ಉದ್ಯೋಗ | : | ಕೃಷಿ | |
| ವಾಸಸ್ಥಳ | : | ಸಂಪ್ಯ, ಪುತ್ತೂರು ತಾಲೂಕು. | |

ಮುಖ್ಯ ವಿಚಾರಣೆಃ  ಮಾನ್ಯ ಸರಕಾರಿ ಅಭಿಯೋಜಕರಿಂದಃ

ನನ್ನ ಮನೆ ಆರ್ಯಾಪು ಗ್ರಾಮದ ಬಾಳಿಕೆ ಮನೆ ಆಗಿರುತ್ತದೆ. ದಿನಾಂಕ 02/03/2019 ರಲ್ಲಿ ನಮ್ಮ ಮನೆಯಲ್ಲಿ ಭೂತ ಕೋಲ ಕಾರ್ಯಕ್ರಮವನ್ನು ಇಟ್ಟುಕೊಂಡಿದ್ದು ಸದರಿ ಭೂತ ಕೋಲದಲ್ಲಿ ದೈವ ನರ್ತನೆ ಮಾಡಲು ಪ್ರಾಸಾ-3 ಮತ್ತು ಆರೋಪಿ ಬಂದಿದ್ದರು. ಸದರಿ ಭೂತ ಕೋಲ ರಾತ್ರಿ 2.00 ಗಂಟೆಗೆ ಮುಗಿದಿರುತ್ತದೆ. ಸದರಿ ಭೂತ ಕೋಲದ ನಂತರ ಅವರು ಹೊರಟು ಹೋಗಿರುತ್ತಾರೆ. ಸದರಿ ಭೂತ ಕೋಲ ನಡೆದ ಒಂದು ದಿನದ ನಂತರ ಉಪ್ಪಿನಂಗಡಿ ಕಂಬಳ ಗದ್ದೆಯ ಸಮೀಪ ಕೊಲೆ ನಡೆದ ವಿಚಾರ ನನಗೆ ಪತ್ರಿಕೆ ಓದಿ ತಿಳಿದು ಬಂದಿರುತ್ತದೆ. ಆ ಕಂಬಳದ ಗದ್ದೆಯ ಪಕ್ಕದಲ್ಲಿ ಯಾರು ಕೊಲೆ ಮಾಡಿರುತ್ತಾರೆ ಎಂಬುವುದು ನನಗೆ ಗೊತ್ತಿರುವುದಿಲ್ಲ. ಸದರಿ ಕೊಲೆಗೂ ಮತ್ತು ಆರೋಪಿಗೂ ಯಾವ ರೀತಿಯ ಸಂಬಂಧ ಇರುತ್ತದೆ ಎಂಬುವುದು ನನಗೆ ಗೊತ್ತಿರುವುದಿಲ್ಲ. ಭೂತ ಕಟ್ಟಲು ಬಂದಂತಹ ವ್ಯಕ್ತಿ ಯಾರು ಎಂಬುವುದು ಈಗ ಗುರುತಿಸಲು ಆಗುವುದಿಲ್ಲ. ನ್ಯಾಯಾಲಯದ ಮುಂದೆ ಇರುವ ಆರೋಪಿಯನ್ನು ನಾನು ಈ ಹಿಂದೆ ನೋಡಿರುವುದಿಲ್ಲ.

(ಈ ಹಂತದಲ್ಲಿ ಸರಕಾರಿ ಅಭಿಯೋಜಕರು ಈ ಸಾಕ್ಷಿಯನ್ನು ಭಾಗಶಃ ಪ್ರತಿಕೂಲ ಸಾಕ್ಷಿ ಎಂದು ಪರಿಗಣಿಸಿ ಪಾಟೀ ಸವಾಲು ಮಾಡಲು ಅನುಮತಿ ಕೋರಿದ್ದಾರೆ. ದಾಖಲಾತಿಗಳನ್ನು ಪರಿಶೀಲಿಸಿ, ಸರಕಾರಿ ಅಭಿಯೋಜಕರ ಮನವಿಯನ್ನು ಪುರಸ್ಕರಿಸಿ, ಪಾಟೀ ಸವಾಲು ಮಾಡಲು ಅನುಮತಿಯನ್ನು ನೀಡಲಾಯಿತು.)

<u>ಪಾಟೀ ಸವಾಲು: ಮಾನ್ಯ ಸರಕಾರಿ ಅಭಿಯೋಜಕರಿಂದ:</u>

2. ನಮ್ಮ ಮನೆಯಲ್ಲಿ ದೈವ ನರ್ತನ ಮಾಡಲು ಬಂದಂತಹ ವ್ಯಕ್ತಿ ಈ ದಿನ ನ್ಯಾಯಾಲಯದ ಮುಂದೆ ಇರುವ ವ್ಯಕ್ತಿ ಆಗಿರುತ್ತಾನೆ ಎಂದರೆ ಸರಿಯಲ್ಲ. ಸದರಿ ವ್ಯಕ್ತಿ ಕಂಬಳ ಗದ್ದೆಯ ಪಕ್ಕದಲ್ಲಿ ಇರುವ ಗ್ಯಾರೇಜು ಬಳಿಯಲ್ಲಿ ತನ್ನ ಸಂಬಂಧಿಕ ಯಶವಂತ ಎಂಬುವವರೊಂದಿಗೆ ಹಣಕಾಸಿನ ವಿಚಾರದಲ್ಲಿ ದೈವ ನರ್ತನೆಗೆ ಉಪಯೋಗಿಸುವ ಚೂರಿಯಿಂದ ಇರಿದು ಕೊಲೆ ಮಾಡಿರುವ ವಿಚಾರ ನನಗೆ ತಿಳಿದು ಬಂದಿದ್ದು ಆದರೂ ಸಹ ಆರೋಪಿ ನಮ್ಮ ಮನೆಯಲ್ಲಿ ದೈವ ನರ್ತನೆ ಮಾಡಿದ್ದಾರೆ ಎಂಬ ಕಾರಣದಿಂದ ಅವರನ್ನು ಈ ಕೇಸಿನಿಂದ ಪಾರು ಮಾಡಲು ಈ ದಿನ ನಾನು ಸುಳ್ಳು ಸಾಕ್ಷ್ಯ ಹೇಳುತ್ತಿದ್ದೇನೆ ಎಂದರೆ ಸರಿಯಲ್ಲ.

<u>ಪಾಟೀ ಸವಾಲು: ಆರೋಪಿ ಪರ ಶ್ರೀ ಎಸ್.ಜಿ.ಎನ್. ವಕೀಲರಿಂದ:</u>

3. ನಮ್ಮ ಮನೆಯಲ್ಲಿ ದೈವ ನರ್ತನೆ ಮಾಡಿದಂತಹ ಭೂತಗಳು ಎಂದರೆ ಒಂದು ಭೂತ ಕಲ್ಲುರ್ಟಿ ಮತ್ತು ಇನ್ನೊಂದು ಭೂತ ಗುಳಿಗ. ಸದರಿ ನರ್ತನೆಯು ಒಂದಾದ ನಂತರ ಇನ್ನೊಂದನ್ನು ಮಾಡುತ್ತಾರೆ. ಸಾಮಾನ್ಯವಾಗಿ ಸದರಿ ಭೂತ ಕೋಲ ಮುಗಿಯುವಷ್ಟರಲ್ಲಿ ಸುಮಾರು 4.00 ಗಂಟೆ ಆಗಿರಬಹುದು ಎಂದರೆ ಸಾಕ್ಷಿಯು ತನಗೆ ನೆನಪಿರುವುದಿಲ್ಲ ಎಂದು ಉತ್ತರಿಸುತ್ತಾರೆ.

<u>ಮರುವಿಚಾರಣೆ:</u> ಇಲ್ಲ.

(ಸಾಕ್ಷಿದಾರರ ಹೇಳಿಕೆಯಂತೆ ನನ್ನ ಉಕ್ತಲೇಖನ ರೀತ್ಯಾ ನ್ಯಾಯಾಲಯದಲ್ಲಿ ಬೆರಳಚ್ಚು ಮಾಡಲಾಯಿತು.)

ಓದಿ ಹೇಳಿ ಕೇಳಿ ಸರಿ ಇದೆ.

5ನೇ ಹೆಚ್ಚುವರಿ ಜಿಲ್ಲಾ ಮತ್ತು ಸತ್ರ ನ್ಯಾಯಾಧೀಶರು,
ದ.ಕ., ಮಂಗಳೂರು, ಕಾರ್ಯನಿರ್ವಹಣೆ: ಪುತ್ತೂರು.